***ಈ ಜಗತ್ತಿನ ಅಂತ್ಯದ ಸಮಯವು ದೇವರಿಗೆ ಹೊರತು ಮತ್ತಾರಿಗೂ ತಿಳಿಯದು. 2011 ನೇ ವರುಷದ ಮೇ 21ರಂದು ಭಾವಾವೇಶ ಉಂಟಾಗುವುದು ಮತ್ತು ನ್ಯಾಯನಿರ್ಣಯದ ದಿನವಾಗಿರುವುದು ಎಂಬುದನ್ನು ಬೋಧಿಸುವುದಕ್ಕೆ ಯಾರಿಗಾದರು ಧೈರ್ಯ ಇದೆಯೆ? ಕ್ರಿಸ್ತರು ತಿರುಗಿ ಬರುವ ದಿನವನ್ನಾಗಲಿ ಅಥವಾ ಗಳಿಗೆಯನ್ನಾಗಲಿ ಯಾರು ತಿಳಿಯಲಾರರು ಎಂಬುದಾಗಿ ಬೈಬಲ್ ಅತಿ ಸರಳವಾಗಿ ಹೇಳುವುದೆ? ನಿಜವಾಗಿಯೂ ಬೈಬಲ್ ಅದನ್ನೆ ಬೋಧಿಸಿದೆ.***

# ಯಾರೂ ಕೂಡ ಗಳಿಗೆಯನ್ನಾಗಲಿ ಅಥವಾ ದಿನವನ್ನಾಗಲಿ ತಿಳಿಯಲಾರರು?

ಬೈಬಲ್ ಅದನ್ನು ಯಾಕೆ ಬೋಧಿಸಿದೆ ಎಂಬುದನ್ನು ಬೈಬಲ್ ಹೇಳುತ್ತದೆ. ಅಪೊಸ್ತಲರಕೃತ್ಯಗಳ ಅಧ್ಯಾಯ 1 ರಲ್ಲಿರುವ ಶ್ಲೋಕ 7 ರಲ್ಲಿ, ಹೊಸ ಒಡಂಬಡಿಕೆಯ ಕ್ರೈಸ್ತ ದೇವಾಲಯ ಪ್ರಾರಂಭವಾಗುವ ಸಮಯದಲ್ಲಿ ಏಸು ತಮ್ಮ ಅನುಯಾಯಿಗಳಿಗೆ ಬೋಧಿಸಿದ್ದಾರೆ:

**"ಆತನು ಅವರಿಗೆ – ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ."**

ಮುಂದಿನ ಶ್ಲೋಕದಲ್ಲಿ ಏಸು ಹೇಳಿದ್ದಾರೆ:

**"ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು."**

ಅಂತ್ಯದ ಸಮಯಕ್ಕೆ ಸಂಬಂಧಪಟ್ಟಂತೆ ಕ್ರೈಸ್ತ ದೇವಾಲಯ ಯುಗದ ಅವಧಿಯಲ್ಲಿ ಹೆಚ್ಚಿನ ಕುತೂಹಲ ಇರುವುದು ಎಂಬುದನ್ನು ನಾವು ಈ ಶ್ಲೋಕಗಳಿಂದ ಕಲಿಯುವೆವು, ಆದರೆ ನಂಬಿಕೆಯುಳ್ಳವರು ಎಂದಿಗೂ ಈ ಪ್ರಶ್ನೆಯೊಂದಿಗೆ ಮಗ್ನನಾಗಿರಲಿಲ್ಲ. ಅವರು ತಮ್ಮ ಗಮನವನ್ನು ಜಗತ್ತಿಗೆ ಸುವಾರ್ತೆಯನ್ನು ಸಾರುವ ಕೆಲಸದ ಮೇಲೆ ಕೇಂದ್ರೀಕರಿಸಬೇಕಾಗಿತ್ತು.

ಆದುದರಿಂದ, ಧರ್ಮಶಾಸ್ತ್ರಜ್ಞನೊಬ್ಬ ಎಷ್ಟು ಕಲಿತ್ತಿದ್ದರೂ ಅಥವಾ ಬೈಬಲಿನ ವಿದ್ಯಾರ್ಥಿಯೊಬ್ಬ ಎಷ್ಟು ಕಲಿತ್ತಿದ್ದರೂ ಕೂಡ ಅಥವಾ ಅವರು ಎಷ್ಟು ಶ್ರದ್ಧೆಯಿಂದ ಬೈಬಲನ್ನು ಅಧ್ಯಯನವನ್ನು ಮಾಡಿದ್ದರೂ ಕೂಡ ಅಥವಾ ಎಷ್ಟು ವಿಧೇಯತೆಯಿಂದ ಕ್ರಿಸ್ತರ ಸೇವೆಯನ್ನು ಮಾಡಿದ್ದರೂ ಕೂಡ, ಅವೆಲ್ಲದರ ಹೊರತಾಗಿಯೂ, ಅವರಿಗೆ ಬೈಬಲಿನಿಂದ ಜಗತ್ತಿನ ಅಂತ್ಯದ ವೇಳಾಪಟ್ಟಿಯನ್ನು ಕಲಿಯುವುದು ಅಸಾಧ್ಯವಾಗಿತ್ತು. ತನಗೆ ಅಂತ್ಯದ ಸಮಯವು ತಿಳಿದಿದೆ ಎಂದು ಯಾರಾದರೂ ಪ್ರತಿಪಾಧಿಸಿದ್ದರೆ ಅದು ಯಾವಾಗಲೂ ತಪ್ಪಾಗಿತ್ತು.

ಹೀಗಿದ್ದರೂ ಕೂಡ, ಬೈಬಲಿನಲ್ಲಿ ಹೆಚ್ಚು ಗಮನಸೆಳೆಯುವ ಒಂದು ಹೇಳಿಕೆ ಇದೆ. ಅದನ್ನು ಪ್ರಸಂಗಿಗಳ ಅಧ್ಯಾಯ 8 ರಲ್ಲಿರುವ ಶ್ಲೋಕ 5 ರಲ್ಲಿ ದಾಖಲು ಮಾಡಲಾಗಿದೆ. ಅಲ್ಲಿ ದೇವರು ಹೀಗೆ ಘೋಷಿಸುತ್ತಾರೆ:

**"ಆಜ್ಞೆಯನ್ನು ಕೈಕೊಳ್ಳುವವನು ಕೇಡನ್ನು ಅನುಭವಿಸನು; ಕಾಲವೂ ನ್ಯಾಯತೀರ್ಪೂ ಉಂಟೆಂಬುದು ಜ್ಞಾನಿಯ ಬುದ್ಧಿಗೆ ಗೊತ್ತು; ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯತೀರ್ಪೂ ಇರುವವಲ್ಲವೆ."**

ಬೈಬಲಿನಲ್ಲಿ ಒಬ್ಬ ವಿವೇಕವುಳ್ಳ ವ್ಯಕ್ತಿ ಅಂದರೆ ಬೈಬಲಿನ ಅಧಿಕಾರದಾಯಿತ್ವದಲ್ಲಿ ದೇವರು ಗಹನವಾದ ನಂಬಿಕೆಯನ್ನು ನೀಡಲ್ಪಟ್ಟ ಒಬ್ಬ ನಿಜವಾದ ನಂಬಿಕೆಯುಳ್ಳವನೆಂದು. ಪ್ರಾರಂಭದ ಸಮಯದಿಂದಲೇ ನಿಜವಾದ ನಂಬಿಕೆಯುಳ್ಳವರು ಅಸ್ಥಿತ್ವದಲ್ಲಿದ್ದರು. ಆದರೆ ಬೈಬಲಿನಲ್ಲಿ ಪ್ರಕಟಿಸಿರುವ ಇತಿಹಾಸದ ಕಾಲದಕ್ರಮಾನುಗತಿ ಎಂದಿಗೂ ನಿಜವಾದ ನಂಬಿಕೆಯುಳ್ಳವರ ಹೃದಯಗಳಿಗೆ ಪ್ರಕಟಿಸಲ್ಪಡಲಿಲ್ಲ. ಉದಾಹರಣೆಗೆ, ಕ್ರೈಸ್ತ ದೇವಾಲಯ ಯುಗದ ಉದ್ದಕ್ಕೂ ಹೆಚ್ಚಿನವರು ಸೃಷ್ಟಿಯು ಕ್ರಿಸ್ತಪೂರ್ವ 4004 ನೇ ವರುಷದಲ್ಲಿ ಸಂಭವಿಸಿದೆ ಎಂದು ಸಾಮಾನ್ಯವಾಗಿ ನಂಬಿದ್ದರು.

ಹೀಗಿದ್ದರೂ, ಸುಮಾರು 35 ವರುಷಗಳ ಹಿಂದೆ ದೇವರು ಇತಿಹಾಸದ ಕಾಲದಕ್ರಮಾನುಗತಿಗೆ ನಿಜವಾದ ನಂಬಿಕೆಯುಳ್ಳವರನ್ನು ತೆರೆಯಲು ಪ್ರಾರಂಭಿಸಿದರು. ಹಾಗಾಗಿ, ಹಿಂದಿನ ಘಟನೆಗಳನ್ನು ನಮ್ಮ ಆಧುನಿಕ ಪಂಚಾಂಗದೊಂದಿಗೆ ಸಮನ್ವಯಗೊಳಿಸುವಾಗ, ಕ್ರಿಸ್ತಪೂರ್ವ 11013 ರಲ್ಲಿ ಸೃಷ್ಟಿ, ನೋಕನ ಕಾಲದ ಪ್ರವಾಹ ಕ್ರಿಸ್ತಪೂರ್ವ 4990 ರಲ್ಲಿ, ಇಸ್ರಾಯೇಲ್ಯರು ಐಗುಪ್ತದಿಂದ ವಲಸೆ ಹೋದದ್ದು ಕ್ರಿಸ್ತಪೂರ್ವ 1447 ರಲ್ಲಿ ಮತ್ತು ಸೊಲೊಮನನು ಸತ್ತದ್ದು ಕ್ರಿಸ್ತಪೂರ್ವ 931 ರಲ್ಲಿ ಮುಂತಾದ ಐತಿಹಾಸಿಕ ದಿನಾಂಕಗಳನ್ನು ನಾವು ಕಲಿಯಬಹುದೆಂಬುದನ್ನು ಬೈಬಲ್ ಬೋಧಿಸುವುದನ್ನು ನಾವು ಶೋಧಿಸಿದ್ದೇವೆ.

ಹೀಗಿದ್ದರೂ ಕೂಡ, ಇತ್ತೀಚಿನ ವರುಷಗಳವರೆಗೆ ಇತಿಹಾಸದ ಸಂಪೂರ್ಣ ಕಾಲದಕ್ರಮಾನುಗತಿಯ ನಿಖರವಾದ ಜ್ಞಾನವನ್ನು ನಿಜವಾದ ನಂಬಿಕೆಯುಳ್ಳವರಿಗೆ ದೇವರು ಬೈಬಲಿನಿಂದ ಪ್ರಕಟಿಸಿರಲಿಲ್ಲ. ಈ ಕಾಲದಕ್ರಮಾನುಗತಿಯು ಅಂತ್ಯದ ಸಮಯದವರೆಗೂ ವಿಸ್ತಾರಗೊಂಡಿದೆ. ಇತ್ತೀಚಿನ ಕೆಲವು ವರುಷಗಳಲ್ಲಿ, ಜಗತ್ತಿನ ಅಂತ್ಯದ ಸಮಯದಲ್ಲಿ ನಾವು ಸಮೀಪಿಸುವವರೆಗೂ ಬೈಬಲಿನಲ್ಲಿ ಸಂಪೂರ್ಣವಾಗಿ ಗುಪ್ತವಾಗಿದ್ದ ಅನೇಕ ಸತ್ಯಗಳನ್ನು ಈಗ ದೇವರು ಪ್ರಕಟಿಸುತ್ತಿದ್ದಾರೆ.

***ಹೀಗೆ ಆಗಲು ಹೇಗೆ ಸಾಧ್ಯ?***

ಇದು ಸಂಭವಿಸಲೇಬೇಕೆಂಬುದನ್ನು ಬೈಬಲಿನಲ್ಲಿ ಸ್ಪಷ್ಟವಾಗಿ ಪ್ರವಾದಿಸಲಾಗಿತ್ತು. ಬೈಬಲ್ ಎಂಬುದು ಜೀವಂತಪದವಾಗಿದೆ ಮತ್ತು ಬೈಬಲಿನ ಪದಗಳನ್ನು ಕೇಳುವುದಕ್ಕೆ ಮತ್ತು ಓದುವುದಕ್ಕೆ, ಪವಿತ್ರ ಆತ್ಮವು ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ತಿಳುವಳಿಕೆಯನ್ನು ತೆರೆಯುವ ಅಗತ್ಯವಿರುವುದು. ಆದುದರಿಂದ, ಜಗತ್ತಿನ ಅಂತ್ಯದ ಸಮಯದ ಅತೀ ಸಮೀಪದವರೆಗೆ ಬೈಬಲಿನ ಅನೇಕ ಸತ್ಯಗಳನ್ನು ಯಾರಿಗೂ ತಿಳಿಯಪಡಿಸಲು ತೆರೆಯುವುದು ದೇವರ ಯೋಜನೆಯಾಗಿರದ ಕಾರಣದಿಂದಾಗಿ, ಈಗ ಮಾತ್ರ ಬೈಬಲಿನ ಸತ್ಯಗಳನ್ನು ತಿಳಿದುಕೊಳ್ಳುವುದು ಹೆಚ್ಚು ಮುಖ್ಯವಾಗಿದೆ. ***ಇದು ಸಂಭವಿಸಲಿದೆ ಎಂದು ಬೈಬಲ್ ನಮಗೆ ಹೇಳುವುದು.***

**ಮುಚ್ಚಲ್ಪಟ್ಟಿದ್ದ ಆ ಪುಸ್ತಕ**

ದಾನಿಯೇಲನ ಪುಸ್ತಕದಲ್ಲಿ ಅಂತ್ಯದ ಸಮಯದ ಘಟನೆಗಳ ಬಗ್ಗೆ ದೇವರು ಹೆಚ್ಚು ಹೇಳುವುದಿದೆ. ಅವುಗಳಲ್ಲಿ ಹೆಚ್ಚಿನದನ್ನು ದಾನಿಯೇಲನು ತಿಳಿದುಕೊಂಡಿದ್ದನು ಯಾಕೆಂದರೆ ಅದು ಅಷ್ಟು ಭಯಹುಟ್ಟಿಸುವ ಮಾಹಿತಿಯಾಗಿತ್ತು, ಹೆಚ್ಚಿನ ಯಾತನೆ ದಾವೀದನಿಗೆ ಉಂಟಾಯಿತು. ಉದಾಹರಣೆಗೆ, ದಾನಿಯೇಲನ ಅಧ್ಯಾಯ 8 ರಲ್ಲಿರುವ ಶ್ಲೋಕ 27 ರಲ್ಲಿ ನಾವು ಓದುತ್ತೇವೆ:

**"ಆಗ ದಾನಿಯೇಲನಾದ ನಾನು ಬೆಂಡಾಗಿ ಕೆಲವು ದಿವಸ ಕಾಯಿಲೆಬಿದ್ದೆನು; ಆ ಮೇಲೆ ಎದ್ದು ರಾಜ ಕಾರ್ಯವನ್ನು ನಡೆಸಿದೆನು; ಆ ಕನಸಿಗೆ ಬೆಚ್ಚಿ ಬೆರಗಾದೆನು; ಅದು ಯಾರಿಗೂ ತಿಳಿಯಲಿಲ್ಲ."**

ಆ ಬಳಿಕ, ದಾನಿಯೇಲನ ಅಧ್ಯಾಯ 12 ರಲ್ಲಿರುವ ಶ್ಲೋಕ 4 ಮತ್ತು 9 ರಲ್ಲಿ ದೇವರು ದಾನಿಯೇಲನಿಗೆ ಹೇಳಿದ್ದಾರೆ:

**"ದಾನಿಯೇಲನೇ, ನೀನು ಈ ಮಾತುಗಳನ್ನು ಮುಚ್ಚಿಡು; ಅವುಗಳನ್ನು ಬರೆಯುವ ಗ್ರಂಥಕ್ಕೆ ಮುದ್ರೆ ಹಾಕು, ಅಂತ್ಯ ಕಾಲದವರೆಗೆ ಮರೆಯಾಗಿರಲಿ; ಬಹು ಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವದು." "ಅವನು – ದಾನಿಯೇಲನೇ, ಈ ಮಾತುಗಳು ಅಂತ್ಯ ಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿವೆ, ಹೋಗು."**

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಬೈಬಲ್ ಎಂಬ ಪುಸ್ತಕದಲ್ಲಿ ಅಂತ್ಯದ ಸಮಯಕ್ಕೆ ಸಂಬಂಧಪಟ್ಟ ಮುಖ್ಯವಾದ ಮಾಹಿತಿಯನ್ನು ದಾಖಲಿಸಲಾಗಿದೆ ಎಂದು ನಮಗೆ ದೇವರು ಹೇಳುತ್ತಾರೆ, ಆದರೆ ಜಗತ್ತು ಅಂತ್ಯಕ್ಕೆ ಸಮೀಪವಾಗುವವರೆಗೆ ಅದು ದೇವರಿಂದ ಪ್ರಕಟನೆಗೊಳ್ಳಲಿಲ್ಲ.

ಪ್ರಕಟನೆಯ ಅಧ್ಯಾಯ 22 ರಲ್ಲಿರುವ ಶ್ಲೋಕ 18 ಮತ್ತು19 ರಲ್ಲಿ ನಾವು ಓದುತ್ತೇವೆ:

**"ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ – ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದು ಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರುವಗಳನ್ನು ತಂದುಹಾಕುವನು. ಯಾವನಾದರೂ ಈ ಪ್ರವಾದನ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು."**

ಸುಮಾರಾಗಿ ಕ್ರಿಸ್ತಶಕ 95 ರಲ್ಲಿ ಬೈಬಲ್ ಪೂರ್ಣಗೊಂಡ ಬಳಿಕ, ಎಂದಿಗೂ ಬೈಬಲಿಗೆ ಇತರ ಪದಗಳನ್ನು ಸೇರಿಸಲಾಗಿಲ್ಲ ಎಂಬ ನಿಖರವಾದ ಭರವಸೆಯನ್ನು ಈ ಶ್ಲೋಕಗಳು ನಮಗೆ ನೀಡುತ್ತವೆ. ಆದುದರಿಂದ ಅಂತ್ಯದ ಸಮಯದ ಯಾವುದೇ ಮಾಹಿತಿಯನ್ನು ದಾವೀದನಿಗೆ ನೀಡಿರಲಿ, ಆದರೆ ಅಂತ್ಯದ ಸಮಯದವರೆಗೆ ಅದನ್ನು ತಿಳಿದುಕೊಳ್ಳಲಿಲ್ಲವೋ, ಅದನ್ನು ಬೈಬಲ್ ಪೂರ್ಣಗೊಳ್ಳುವ ಮೊದಲು ಅದಕ್ಕೆ ಸೇರಿಸಲಾಗಿತ್ತು. ಹೀಗಿದ್ದರೂ, ಜಗತ್ತು ಅಂತ್ಯದ ಸಮೀಪಕ್ಕೆ ಬರುವವರೆಗೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ದೇವರು ಬರೆದಿದ್ದಾರೆ. ತಿಳುವಳಿಕೆಯು ಪ್ರಭು ಏಸು ಕ್ರಿಸ್ತರಿಂದ ಮಾತ್ರ ಬರುವುದು ಎಂಬುದನ್ನು ನೆನಪಿನಲ್ಲಿಡಿ. **"ಆ ಮೇಲೆ ಅವರು ಶಾಸ್ತ್ರವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದರು."** ಎಂಬ ಭಾಷೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅಂಥ ಸಂಕೀರ್ಣವಾಗಿ ಮತ್ತು ಕಷ್ಟವಾಗಿ ಬೈಬಲ್ ಯಾಕೆ ಬರೆಯಲ್ಪಟ್ಟಿದೆ ಎಂಬುದನ್ನು ಇದು ವಿವರಿಸುತ್ತದೆ. **"ಸಾಮ್ಯವಿಲ್ಲದೆ ಅವರಿಗೆ ಹೇಳಲಿಲ್ಲ"** ಎಂದು ನಾವು ಮಾರ್ಕನ ಅಧ್ಯಾಯ 4 ರಲ್ಲಿರುವ ಶ್ಲೋಕ 34 ರಲ್ಲಿ ಓದಿದ ಹಾಗೆ, ಕ್ರಿಸ್ತರು ಯಾಕೆ ದೃಷ್ಟಾಂತಕತೆಯಲ್ಲಿ ಮಾತಾಡಿದ್ದಾರೆ ಎಂಬುದಕ್ಕೆ ಇದೊಂದು ಕಾರಣ.

**ಪುಸ್ತಕವು ತೆರೆಯಲ್ಪಟ್ಟಿದೆ**

ಆದರೆ ಬಳಿಕ ಪ್ರಕಟನೆಯ ಅಧ್ಯಾಯ 5 ರಲ್ಲಿರುವ ಶ್ಲೋಕ 1 ರಿಂದ 9 ರವರೆಗೆ ನಾವು ಓದುತ್ತೇವೆ:

**"ಸಿಂಹಾಸನದ ಮೇಲೆ ಕುಳಿತ್ತಿದ್ದಾತನ ಬಲಗೈಯಲ್ಲಿ ಒಂದು ಸುರುಳಿಯನ್ನು ಕಂಡೆನು; ಅದರ ಎರಡು ಪಕ್ಕೆಗಳಲ್ಲಿಯೂ ಬರೆದಿತ್ತು; ಅದು ಏಳು ಮುದ್ರೆಗಳಿಂದ ಮುದ್ರಿತವಾಗಿತ್ತು. ಇದಲ್ಲದೆ ಬಲಿಷ್ಠನಾದ ಒಬ್ಬ ದೇವದೂತನು – ಈ ಸುರುಳಿಯನ್ನು ಬಿಚ್ಚುವದಕ್ಕೂ ಇದರ ಮುದ್ರೆಗಳನ್ನು ಒಡೆಯುವದಕ್ಕೂ ಯಾವನು ಯೋಗ್ಯನು ಎಂದು ಮಹಾ ಶಬ್ಧದಿಂದ ಸಾರುವದನ್ನು ಕಂಡೆನು. ಆ ಸುರುಳಿಯನ್ನು ಬಿಚ್ಚುವದಕ್ಕಾದರೂ ಅದರೊಳಗೆ ನೋಡುವದಕ್ಕಾದರೂ ಪರಲೋಕದಲ್ಲಿಯಾಗಲಿ ಭೂಮಿಯಲ್ಲಿಯಾಗಲಿ ಭೂಮಿಯ ಕೆಳಗಾಗಲಿ ಯಾವನಿಗೂ ಶಕ್ತಿ ಇರಲಿಲ್ಲ. ಆ ಸುರುಳಿಯನ್ನು ಬಿಚ್ಚುವದಕ್ಕಾಗಲಿ ಅದರಲ್ಲಿ ನೋಡುವದಕ್ಕಾಗಲಿ ಯೋಗ್ಯನಾದವನು ಒಬ್ಬನೂ ಸಿಕ್ಕಲಿಲ್ಲವಾದ ಕಾರಣ ನಾನು ಬಹಳವಾಗಿ ಅಳುತ್ತಿರಲು ಹಿರಿಯರಲ್ಲಿ ಒಬ್ಬನು ನನಗೆ – ಅಳಬೇಡ, ಅಗೋ, ಯೂದ ಕುಲದಲ್ಲಿ ಜನಿಸಿದ ಸಿಂಹವೂ ದಾವೀದನ ಅಂಕುರದವನೂ ಆಗಿರುವಾತನು ಜಯಹೊಂದಿದನು; ಆತನು ಆ ಸುರುಳಿಯನ್ನೂ ಅದರ ಏಳು ಮುದ್ರೆಗಳನ್ನು ಬಿಚ್ಚುವನು ಎಂದು ಹೇಳಿದನು. ಸಿಂಹಾಸನವೂ ನಾಲ್ಕು ಜೀವಿಗಳೂ ಇದ್ದ ಸ್ಥಳಕ್ಕೂ ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿ ಕೊಯ್ಯಲ್ಪಟ್ಟದ್ದಾಗಿ ನಿಂತಿರುವುದನ್ನೂ ಕಂಡೆನು. ಅದಕ್ಕೆ ಏಳು ಕೊಂಬುಗಳೂ ಏಳು ಕಣ್ಣುಗಳೂ ಇದ್ದವು; ಅವು ಏನಂದರೆ ಭೂಮಿಯ ಮೇಲೆಲ್ಲಾ ಕಳುಹಿಸಲ್ಪಟ್ಟಿರುವ ದೇವರ ಏಳು ಆತ್ಮಗಳು. ಈತನು ಮುಂದೆ ಬಂದು ಸಿಂಹಾಸನದ ಮೇಲೆ ಕೂತಿದ್ದಾತನ ಬಲಗೈಯೊಳಗಿಂದ ಆ ಸುರುಳಿಯನ್ನು ತೆಗೆದುಕೊಂಡನು. ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತು ನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವರ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು. ಅವರು ಹೊಸ ಹಾಡನ್ನು ಹಾಡುತ್ತಾ – ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗನೇ; ನೀವು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲಕುಲಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ."**

ಮುದ್ರಿತವಾಗಿದ್ದ ಒಂದು ಪುಸ್ತಕ ಇದೆ ಮತ್ತು ಅದನ್ನು ಸ್ವತ: ಕ್ರಿಸ್ತರು ತೆರೆದಿರಬೇಕೆಂದು ಈ ಶ್ಲೋಕಗಳು ಬೋಧಿಸುತ್ತವೆ. ಬೈಬಲ್ ವಿವರಿಸುವ ದೃಷ್ಟಿಯಲ್ಲಿದ್ದ ಒಂದು ಪುಸ್ತಕ ದಾನಿಯೇಲನ ಅಧ್ಯಾಯ 12 ಆಗಿರಬಹುದು.

---

•1974 ರಲ್ಲಿ ಮೊದಲು ಪ್ರಕಟಗೊಂಡ, Adam When ಎಂಬ ಪುಸ್ತಕವನ್ನು ನೋಡಿ. ಫ್ಯಾಮಿಲೀ ರೇಡಿಯೋ, ಓಕ್ ಲ್ಯಾಂಡ್, ಸಿ ಎ, 94621, ಯು ಎಸ್ ಎ, ಯನ್ನು ಸಂಪರ್ಕಿಸಿ ಉಚಿತವಾಗಿ ಆಂಗ್ಲ ಭಾಷೆಯ ಪ್ರತಿಯನ್ನು ಪಡೆದುಕೊಳ್ಳಿ ಅಥವಾ www.familyradio.com. ಅಂತರ್ಜಾಲದಿಂದ ಡೌನ್ ಲೋಡ್ ಮಾಡಿಕೊಳ್ಳಿ.

ಆ ಪುಸ್ತಕವು ಏಳು ಮುದ್ರೆಗಳಿಂದ ಮುದ್ರಿತಗೊಂಡಿತ್ತು. ಆದುದರಿಂದ, ಆ ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ಸಂಪೂರ್ಣ ಮಾಹಿತಿಗಳು ನಮ್ಮ ತಿಳುವಳಿಕೆಗೆ ದೊರೆಯಬೇಕಾದರೆ ಆ ಎಲ್ಲಾ ಏಳು ಮುದ್ರೆಗಳು ತೆಗೆಯಲ್ಪಡಲೇಬೇಕಾಗಿತ್ತು. ನಿಜವಾಗಿಯೂ, ಪ್ರಕಟನೆಯ ಅಧ್ಯಾಯ 8 ರಲ್ಲಿರುವ ಶ್ಲೋಕ 1 ಏಳನೆ ಮುದ್ರೆಯು ತೆರೆಯಲ್ಪಟ್ಟ ಬಗ್ಗೆ ವಿವರಿಸುತ್ತದೆ:

**"ಆತನು ಏಳನೆಯ ಮುದ್ರೆಯನ್ನು ಒಡೆದಾಗ ಸುಮಾರು ಅರ್ಧಗಂಟೇ ಹೊತ್ತಿನವರೆಗೂ ಪರಲೋಕವು ನಿಶ್ಶಬ್ದವಾಯಿತು."**

## ಪರಲೋಕದಲ್ಲಿ ಯಾವಾಗ ನಿಶ್ಶಬ್ದವಾಯಿತು?

ಪರಲೋಕದಲ್ಲಿಂಟಾದ ಅರ್ಧಗಂಟೆಯ ನಿಶ್ಶಬ್ದವು 23 ವರುಷಗಳ ಅಂದರೆ ನಿಖರವಾದ 8400 ದಿವಸಗಳ ಮಹಾಕ್ಲೇಶದ ಅವಧಿಯ ಮೊದಲ ಭಾಗವಾಗಿದ್ದ 2300 ದಿವಸಗಳನ್ನು ಉಲ್ಲೇಖಿಸಿದೆ ಎಂಬುದಾಗಿ ನಾವು ಹಲವಾರು ವರುಷಗಳ ಹಿಂದೆ ಕಲಿತಿದ್ದೇವೆ. ಆ ಅವಧಿಯು 1988 ನೇ ವರುಷದ ಮೇ 21 ರಂದು ಪ್ರಾರಂಭವಾಗಿದೆ. ಈ 2300 ದಿವಸಗಳ ಅವಧಿಯಲ್ಲಿ ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಜಗತ್ತಿನಾದ್ಯಂತ ಸಂಚಯಿತರಾಗಿದ್ದರೆ ಕೆಲವು ಮಾತ್ರ. ಪರಲೋಕದಲ್ಲಿ ನಿಶ್ಶಬ್ದ ಇತ್ತೆಂಬುದನ್ನು ಪ್ರಕಟನೆಯ ಅಧ್ಯಾಯ 8 ರಲ್ಲಿರುವ ಶ್ಲೋಕ 1 ವರದಿಮಾಡಿದೆ. ಆ ಸನ್ನಿವೇಶವು 1988 ನೇ ವರುಷದ ಮೇ 21 ರಲ್ಲಿ ಇದ್ದಿರಬಹುದು ಯಾಕೆಂದರೆ ಪಾಪಾತ್ಮರು ನಿಶ್ಶಬ್ದರಾಗುವಾಗ ಪರಲೋಕದಲ್ಲಿ ಸಂತೋಷವು ಸಂಭವಿಸುವುದು. ಪರಲೋಕದಲ್ಲಿನ ಈ ಸಂತೋಷವನ್ನು ಲೂಕನ ಅಧ್ಯಾಯ 15 ರಲ್ಲಿ 4 ರಿಂದ 32 ರವರೆಗಿನ ಶ್ಲೋಕಗಳಲ್ಲಿ ಬೈಬಲ್ ವರದಿಮಾಡಿದೆ, ಆ ಸಂತೋಷ ನಿಶ್ಶಬ್ದವಾಗಿರಲಿಲ್ಲ.

1988 ನೇ ವರುಷದ ಮೇ 21 ಕ್ರೈಸ್ತ ದೇವಾಲಯ ಯುಗದ ಕೊನೆಯ ದಿನ ಎಂಬುದನ್ನು ನಾವು ಕಲಿತಿದ್ದೇವೆ ಮತ್ತು 23 ವರುಷಗಳ ಅವಧಿಯ ಮಹಾಕ್ಲೇಶದ ಪ್ರಾರಂಭ ದಿನವೂ ಆಗಿರುತ್ತದೆ. ಆ ಅವಧಿಯಲ್ಲಿ ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಸಂಪೂರ್ಣ ಜಗತ್ತಿನಲ್ಲಿ ಸೈತಾನನ ಆಳ್ವಿಕೆಯನ್ನು ದೇವರು ಅಧಿಕೃತವಾಗಿ ನೇಮಿಸಿದ್ದಾರೆ. ಆ 8400 ದಿವಸಗಳ ಅವಧಿಯ ಮೊದಲ 2300 ದಿವಸಗಳ ಅವಧಿಯಲ್ಲಿ ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಜಗತ್ತಿನ ಎಲ್ಲಾ ಕಡೆಗಳಲ್ಲಿ ಪವಿತ್ರ ಆತ್ಮವು ಸುರಿಯುವುದನ್ನು ತೆಗೆಯಲಾಗಿತ್ತು. ಅದು ಪರಲೋಕದಲ್ಲಿ ನಿಶ್ಶಬ್ದವನ್ನುಂಟುಮಾಡಿತು. 23 ವರುಷಗಳ ಮಹಾಕ್ಲೇಶವು ಅಂತ್ಯವಾಗುವವರೆಗೆ ಕ್ರೈಸ್ತ ದೇವಾಲಯಗಳಲ್ಲಿ ಈ ದು:ಖದ ಸನ್ನಿವೇಶವು ಮುಂದುವರಿಯುವುದು. ಹೀಗಿದ್ದರೂ, ಕ್ರೈಸ್ತ ದೇವಾಲಯದ ಅಂತ್ಯದ ವರುಷವಾದ 1988 ನೇ ವರುಷದ ಮೇ 21 ರ ಮೊದಲ 2300 ದಿವಸಗಳ ಪ್ರಾರಂಭದಲ್ಲಿ ಪವಿತ್ರ ಆತ್ಮವು ಮತ್ತೊಮ್ಮೆ ಸುರಿಯಲ್ಪಟ್ಟಿತು ಮತ್ತು ಜಗತ್ತಿನ ಉದ್ದಕ್ಕೂ ಆದರೆ ಯಾವುದೇ ಕ್ರೈಸ್ತ ದೇವಾಲಯದಲ್ಲಿ ಅಲ್ಲ ಬೈಬಲ್ ಅದನ್ನು "ಹಿಂಗಾರು ಮಳೆ" ಎಂದು ಕರೆದಿದೆ. ಜೆಕಾರ್ಯನ ಅಧ್ಯಾಯ 10 ರಲ್ಲಿರುವ ಶ್ಲೋಕ 1 ಮತ್ತು ಯಾಕೋಬನ ಅಧ್ಯಾಯ 5 ರಲ್ಲಿರುವ ಶ್ಲೋಕ 7. ಮತ್ತು ಪರಲೋಕದಲ್ಲಿ ಅತಿಯಾದ ಆನಂದವನ್ನು ತರುವುದರ ಮೂಲಕ ದೇವರು ರಕ್ಷಣೆಯ ಕೊನೆಯ ದೊಡ್ಡ ಕೊಯ್ಲೊಂದನ್ನು ಪ್ರಾರಂಭಿಸಿದರು. ಆದರೆ ಈ ರಕ್ಷಣೆಯು ಯಾವುದೇ ಕ್ರೈಸ್ತ ದೇವಾಲಯದಲ್ಲಿ ಸಂಭವಿಸುವುದಿಲ್ಲ, ಆದರೆ ಮಹಾಕ್ಲೇಶದ ಅಂತ್ಯದ ವರುಷವಾದ 2011 ನೇ ವರುಷದ ಮೇ 21 ರ ವರೆಗೆ ಅದು ಕ್ರೈಸ್ತ ದೇವಾಲಯಗಳ ಹೊರಗೆ ಮುಂದುವರಿಯುವುದು.

ಮಹಾಕ್ಲೇಶದ ಅವಧಿಯ ಪ್ರಾರಂಭದ ದಿನವಾದ 1988 ನೇ ವರುಷದ ಮೇ 21 ರ ದಿನದ ಪ್ರಾರಂಭದಲ್ಲಿ ಕ್ರಿಸ್ತರು ಮುದ್ರೆಯನ್ನು ತೆರೆದಿರುವುದರಿಂದ ಮತ್ತು ದೇವರು ದಾನಿಯೇಲನಿಗೆ ಮುದ್ರೆಹಾಕಬೇಕೆಂದು ಆದೇಶಿಸಿದ ಪುಸ್ತಕದ ಕೊನೆಯ ಮುದ್ರೆಯನ್ನು ತೆರೆದಿರುವುದರಿಂದ, ಈ ಕೆಲವು ವರುಷಗಳಲ್ಲಿ ದೇವರು ಯಾಕೆ ಬೈಬಲಿನಿಂದ ಅಷ್ಟು ಪ್ರಮಾಣದ ಸತ್ಯಗಳನ್ನು ನಮಗೆ ಪ್ರಕಟಿಸುತ್ತಿದ್ದಾರೆ ಎಂಬುದನ್ನು ಈಗ ನಾವು ತಿಳಿದುಕೊಳ್ಳಬಹುದಾಗಿದೆ. ಇದು ಅಂತ್ಯದ ನಿಖರವಾದ ಸಮಯವನ್ನು ಮತ್ತು ದೇವರ ನ್ಯಾಯನಿರ್ಣಯದ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಒಳಗೊಂಡಿದೆ. "ಸಮಯ" ಎಂಬ ಪದವು "ಗಳಿಗೆ"ಗೆ ಸಮಾನಾರ್ಥಕ ಪದವಾಗಿದೆ. ನ್ಯಾಯನಿರ್ಣಯ ಎಂಬುದು ನ್ಯಾಯನಿರ್ಣಯದ ದಿನವನ್ನು ಉಲ್ಲೇಖಿಸುತ್ತದೆ ಮತ್ತು ಅದನ್ನು ಪದೇಪದೆಯಾಗಿ "ದಿನ" ಎಂದು ಕರೆಯಲಾಗಿದೆ. ಆದ್ದರಿಂದ, ಪ್ರಸಂಗಿಗಳ ಅಧ್ಯಾಯ 8 ರಲ್ಲಿರುವ ಶ್ಲೋಕ 5 ರಲ್ಲಿ ಪ್ರವಾದಿಸಿರುವ ಕಾಲವನ್ನು ಮತ್ತು ನ್ಯಾಯತೀರ್ಪನ್ನು ತಿಳಿದುಕೊಳ್ಳುವುದು ಅಂದರೆ "ದಿನ"ವನ್ನು ಮತ್ತು "ಗಳಿಗೆ"ಯನ್ನು ತಿಳಿದುಕೊಳ್ಳುವುದು ಎಂದರ್ಥ. ಇದು ಸಂಪೂರ್ಣ ಜಗತ್ತಿಗೆ ದೇವರ ದಯೆಯೊಂದಿಗೆ ಮತ್ತು ಪ್ರೀತಿಯೊಂದಿಗೆ ಸರಿಯಾಗಿ ಹೊಂದಿಕೊಳ್ಳುತ್ತದೆ. ದೇವರು ನೋಹನಿಗೆ ನೀಡಿದ ನಿಖರವಾದ ಮಾಹಿತಿಯನ್ನು ನೆನಪಿಸಿಕೊಳ್ಳಿ, ಹಾಗಾಗಿ, ಸನ್ನಿಹಿತವಾದ ನಾಶನವನ್ನು ಅವನಿಗೆ ಜಗತ್ತಿಗೆ ಎಚ್ಚರಿಸುವುದಕ್ಕೆ ಸಾಧ್ಯವಾಯಿತು. ಹಾಗೆಯೇ, ನಿನೆವೆ ಪಟ್ಟಣವನ್ನು ದೇವರು ನಾಶಮಾಡಲು ಯೋಜನೆ ಮಾಡಿರುವ ನಿಖರವಾದ ದಿನವನ್ನು ನಿನೆವೆಯ ಜನರಿಗೆ ನೀಡಬೇಕೆಂದು ಯೋನನಿಗೆ ದೇವರಿಂದ ಆದೇಶವಾಯಿತು. ಹಾಗೆಯೇ, ನಮ್ಮ ದಿನದಲ್ಲಿ, ನ್ಯಾಯನಿರ್ಣಯದ ಮೊದಲ ದಿನವಾಗಿರುವ ಭಾವಾವೇಶವುಂಟಾಗುವ ನಿಖರವಾದ ಸಮಯವನ್ನು ನಿಜವಾದ ನಂಬಿಕೆಯುಳ್ಳವರಿಗೆ ದೇವರು ಅವರ ಕರುಣೆಯಿಂದ ಮತ್ತು ಪ್ರೀತಿಯಿಂದ ನೀಡಿದ್ದಾರೆ. ಅದರಿಂದ ಅವರು ಜಗತ್ತಿಗೆ ಎಚ್ಚರಿಸಬಹುದು. ದೇವರು ಎಂಥಾ ಕರುಣಾಮಯಿ, ಕೃಪಾಮಯಿ ಮತ್ತು ಪ್ರೀತಿವುಳ್ಳವರು. ಮತ್ತಾಯನ ಅಧ್ಯಾಯ 12 ರಲ್ಲಿರುವ ಶ್ಲೋಕ 41 ರಲ್ಲಿ, ಯೋನನ ದಿನದಲ್ಲಿ ದೇವರು ನಿನೆವೆಯ ಜನರನ್ನು ಸಂಚಯಿತರನ್ನಾಗಿ ಮಾಡಿದ ಹಾಗೆ, ಪ್ರಕಟನೆಯ ಅಧ್ಯಾಯ 7 ರಲ್ಲಿರುವ 9 ರಿಂದ14 ರವರೆಗಿನ ಶ್ಲೋಕಗಳಲ್ಲಿ, ಇಂದು ದೇವರು ಈಗಲೂ ಅನೇಕ ಜನರನ್ನು ಸಂಚಯಿತರನ್ನಾಗಿ ಮಾಡುವುದು ಎಷ್ಟು ಅದ್ಭುತವಾಗಿದೆ.

## ಕ್ರೈಸ್ತ ದೇವಾಲಯಗಳಲ್ಲಿರುವವರಿಗೆ ವಿಧ್ಯುಕ್ತವಾದ ಎಚ್ಚರಿಗೆ

ಭಾವಾವೇಶದ ನಿಜವಾದ ಸಮಯದ ಜ್ಞಾನ ಮತ್ತು ನ್ಯಾಯನಿರ್ಣಯದ ದಿನದ ತಿಳುವಳಿಕೆ ಹೆಚ್ಚು ಮಹತ್ವವುಳ್ಳದ್ದಾಗಿದೆ. ಜಗತ್ತಿನ ಅಂತ್ಯದ ಸಮಯದಲ್ಲಿ ನಿಜವಾದ ನಂಬಿಕೆಯುಳ್ಳವರನ್ನು ಪರಲೋಕಕ್ಕೆ ತರುವುದಕ್ಕೆ ಅಂದರೆ ಭಾವಾವೇಶಗೊಳಿಸುವುದಕ್ಕೆ ಮತ್ತು ನ್ಯಾಯನಿರ್ಣಯದ ದಿನವನ್ನು ಅಂದರೆ ದಿನವನ್ನು ಪ್ರಾರಂಭಿಸುವುದಕ್ಕೆ ಕ್ರಿಸ್ತರು ತಿರುಗಿ ಬರುವ ಸಮಯವನ್ನು ಅಂದರೆ ಗಳಿಗೆಯನ್ನು ನಿಜವಾದ ನಂಬಿಕೆಯುಳ್ಳವರು ತಿಳಿದುಕೊಳ್ಳುವರು ಎಂಬುದನ್ನು ನಿರಾಕರಿಸುವವರನ್ನು ನಾಶಮಾಡುವುದಕ್ಕೆ ನ್ಯಾಯನಿರ್ಣಯದ ದಿನವು ಬರುತ್ತಿದೆ ಎಂಬುದನ್ನು ಒಂದನೆ ಥೆಸಲೋನಿಕದವರ ಅಧ್ಯಾಯ 5 ರಲ್ಲಿರುವ ಶ್ಲೋಕ 2 ಮತ್ತು 3 ರಲ್ಲಿ ದೇವರು ಎಚ್ಚರಿಸಿದ್ದಾರೆ. ಅಲ್ಲಿ ದೇವರು ನಮಗೆ ಈ ರೀತಿಯಾಗಿ ಹೇಳುತ್ತಾರೆ:

**"ರಾತ್ರಿ ಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ. ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವದು; ಅವರು ಹೇಗೂ ತಪ್ಪಿಸಿಕೊಳ್ಳಲಾರರು."**

ಸ್ವತ: ಕ್ರಿಸ್ತರು ರಾತ್ರಿಯಲ್ಲಿ ಕಳ್ಳನು ಬರುವ ಹಾಗೆ ಬರುವೆನು ಎಂಬುದಾಗಿ ಪ್ರಕಟನೆಯ ಅಧ್ಯಾಯ 16 ರಲ್ಲಿರುವ ಶ್ಲೋಕ 15 ರಲ್ಲಿ ಕ್ರಿಸ್ತರು ಬೋಧಿಸುತ್ತಾರೆ. ಪ್ರಕಟನೆಯ ಅಧ್ಯಾಯ 3 ರಲ್ಲಿರುವ ಶ್ಲೋಕ 3 ನ್ನು ಕೂಡ ನೋಡಿ. ಸ್ಪಷ್ಟವಾಗಿ ಕ್ರಿಸ್ತರು ಒಬ್ಬ ಕಳ್ಳ ಅಲ್ಲ. ಅವರು ಪವಿತ್ರ ದೇವರು. ಆದರೆ, ಅವರು ಮತ್ತು ನ್ಯಾಯನಿರ್ಣಯದ ದಿನವು ಕಳ್ಳನಂತೆ ಬರುವುದು. ಅವರು ಬರುವಾಗ ಅವರು ಯಾವ ರೀತಿಯಾದ ಕಳ್ಳರಾಗಿರುವರು ಎಂಬುದನ್ನು ಯೋಹಾನ ಅಧ್ಯಾಯ 10 ರಲ್ಲಿರುವ ಶ್ಲೋಕ10 ರಲ್ಲಿ ದೇವರು ವಿವರಿಸುತ್ತಾರೆ: **"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವುದಕ್ಕೂ ಬರುವದಿಲ್ಲ."**

ಆದ್ದರಿಂದ, ನ್ಯಾಯನಿರ್ಣಯದ ದಿನದೊಂದಿಗೆ ಕ್ರಿಸ್ತರು ಬರುವಾಗ, ಯಾರಿಗೆ ಅವರು ಒಬ್ಬ ಕಳ್ಳನಾಗಿ ಬಂದರೋ ಅವರ ಬದುಕನ್ನು ತೆಗೆದುಕೊಳ್ಳುವುದಕ್ಕೆ ಮತ್ತು ನಾಶಮಾಡುವುದಕ್ಕೆ ಬರುವರು.

## ಕಳ್ಳನು ರಾತ್ರಿಯಲ್ಲಿ ಬರುವನು

ಕ್ರಿಸ್ತರು ಮತ್ತು ನ್ಯಾಯನಿರ್ಣಯದ ದಿನವು ರಾತ್ರಿಯಲ್ಲಿ ಬರುವುದು. **"ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವದು"** ಎಂದು ಒಂದನೆ ಥೆಸಲೋನಿಕದ ಅಧ್ಯಾಯ 5 ರಲ್ಲಿರುವ ಶ್ಲೋಕ 3 ರಲ್ಲಿ ಕ್ರಿಸ್ತರು ಹೇಳುವರು. ಯಾಕೆಂದರೆ ನಾಶನವು ಅವರ ಮೇಲೆ ಬರುವುದು. ಆದರೆ ಆ ಜನರು ಸಂಚಯಿತರಾಗಿಲ್ಲ ಎಂಬುದು ನಮಗೆ ಖಂಡಿತವಾಗಿಯೂ ತಿಳಿಯುವುದು. ಸಂಚಯಿತರಾಗದೆ ಇರುವವರು ಆಧ್ಯಾತ್ಮಿಕ ಕತ್ತಲೆಯಲ್ಲಿರುವರು. ಅವರು ಕತ್ತಲಿನಲ್ಲಿರುತ್ತಾರೆ. "ರಾತ್ರಿಯಲ್ಲಿ ಕಳ್ಳನು ಬರುವ ಹಾಗೆ" ನ್ಯಾಯನಿರ್ಣಯದ ದಿನವು ಅವರಿಗೆ ಬರುವುದು. ಆದಾಗ್ಯೂ, ಅವರು ಕ್ರಿಸ್ತರೊಂದಿಗೆ ಸಮಾಧಾನದೊಂದಿಗೆ ಮತ್ತು ಅವರ ಆರೈಕೆಯಲ್ಲಿ ಸುಭದ್ರರಾಗಿದ್ದೇವೆ ಎಂದು ನಂಬುವರು. **ಆ ಜನರು ಯಾರು?**

2011 ನೇ ವರುಷದ ಮೇ 21 ರಂದು ಕೂಡ, ಜಗತ್ತಿನಲ್ಲಿ ಯಾವುದೇ ಕ್ರೈಸ್ತ ದೇವಾಲಯವನ್ನು ಅನುಸರಿಸುತ್ತಿರುವವರು ಎಂಬುದನ್ನು ಈ ಶ್ಲೋಕದಲ್ಲಿರುವ ಭಾಷೆಯು ಸ್ಪಷ್ಟವಾಗಿ ವಿವರಿಸುತ್ತದೆ. ಯಾಕೆಂದರೆ ಬೈಬಲಿಗೆ ವಿರೋಧಾಭಾಸವಾಗಿರುವ ರಕ್ಷಣೆಯ ಯೋಜನೆಯನ್ನು ಒಳಗೊಂಡು, ಬೈಬಲಿಗೆ ಸತ್ಯವಾಗಿರದ ಅನೇಕ ವಿಷಯಗಳನ್ನು ಕ್ರೈಸ್ತ ದೇವಾಲಯಗಳು ಬೋಧಿಸುತ್ತವೆ. ಮತ್ತು ಪವಿತ್ರ ಆತ್ಮವು ಎಲ್ಲಾ ಕ್ರೈಸ್ತ ದೇವಾಲಯಗಳನ್ನು ತೊರೆದಿದೆ ಮತ್ತು 2011 ನೇ ವರುಷದ ಮೇ 21 ರಲ್ಲಿಯೂ ಯಾವುದೇ ಕ್ರೈಸ್ತ ದೇವಾಲಯವನ್ನು ಅನುಸರಿಸುತ್ತಿರುವವರು ಸಂಚಯಿತರಾಗುವುದಿಲ್ಲ. ಹೀಗಿದ್ದರೂ, ಕ್ರೈಸ್ತ ದೇವಾಲಯಗಳು ತಮ್ಮ ಸದಸ್ಯರಿಗೆ ಅದನ್ನೆ ಬೋಧಿಸುತ್ತವೆ:

1. ತಮ್ಮ ಕ್ರೈಸ್ತ ದೇವಾಲಯದ ನಿವೇದನೆಯ ಸದಸ್ಯರು ಕ್ರಿಸ್ತರ ಆರೈಕೆಯಲ್ಲಿ ಸುರಕ್ಷಿತರಾಗಿರುವರು.
2. ಕ್ರಿಸ್ತರು ತಿರುಗಿ ಬರುವ ದಿನವನ್ನಾಗಲಿ ಅಥವಾ ಗಳಿಗೆಯನ್ನಾಗಲಿ ಯಾರು ತಿಳಿಯಲಾರರು. ಆದುದರಿಂದ, ಕ್ರಿಸ್ತರು ರಾತ್ರಿಯಲ್ಲಿ ಕಳ್ಳನು ಬರುವ ಹಾಗೆ ಬರುವರು ಎಂಬುದು ಅವರಿಗೆ ದೃಢವಾಗಿದೆ.

ಆದರೆ ಆ ಪ್ರೀತಿಯ ಜನರು ತಮ್ಮಷ್ಟಕ್ಕೆ ತಾವು ಆಧ್ಯಾತ್ಮಿಕ ಕತ್ತಲೆಯ ಸಮಯದಲ್ಲಿರುವರು ಎಂಬುದನ್ನು ಮತ್ತು ಕ್ರಿಸ್ತರು ತಿರುಗಿ ಬರುವಾಗ, ಅವರಷ್ಟಕ್ಕೆ ಅವರು ನ್ಯಾಯನಿರ್ಣಯದ ದಿನದಲ್ಲಿ ನಾಶವಾಗುವರು ಎಂಬ ಖಚಿತವಾದ ಪರಿಸ್ಥಿತಿಯನ್ನು ಮನಗಾಣುವುದಿಲ್ಲ. ***ಎಷ್ಟು ಭಯಾನಕವಾಗಿದೆ!*** ಸಮಯದ ಬಗ್ಗೆ ಅಂದರೆ ಗಳಿಗೆ ಬಗ್ಗೆ ಮತ್ತು ದಿನದ ಬಗ್ಗೆ ಅಂದರೆ ನ್ಯಾಯನಿರ್ಣಯದ ದಿನದ ಬಗ್ಗೆ ಹೆಚ್ಚಿನದನ್ನು ನಿಜವಾದ ನಂಬಿಕೆಯುಳ್ಳವರು ತಿಳಿದುಕೊಳ್ಳುವರು. ಅವರು ಆಧ್ಯಾತ್ಮಿಕ ಕತ್ತಲೆಯ ಸಮಯದಲ್ಲಿಲ್ಲ.

ದೇವರು ಬಹಳಷ್ಟು ಕರುಣಾಮಯಿ ಮತ್ತು ಪ್ರೀತಿಸುವವರು ಎಂಬುದನ್ನು ನೆನಪಿನಲ್ಲಿಡಿ. ತಾವು ಕೂಡ ಸಂಚಯಿತರಾಗಬಹುದು ಎಂಬುದಾಗಿ ದೇವರಲ್ಲಿ ಅಂಗಲಾಚುವವರಿಗೆ, ಬೇಡಿಕೊಳ್ಳುವವರಿಗೆ ಮತ್ತು ದೀನರಾಗಿ ಮೊರೆಹೋಗುವವರಿಗೆ ಭರವಸೆ ಇದೆ.

ಜಗತ್ತಿನ ಅಂತ್ಯದ ವಿಚಾರವಾಗಿ ನೀವು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಉಚಿತ ಪುಸ್ತಕಗಳಿಗಾಗಿ ಫ್ಯಾಮಿಲೀ ರೇಡಿಯೋ,ಓಕ್ ಲ್ಯಾಂಡ್, ಕ್ಯಾಲಿಪೋರ್ನಿಯಾ 94621, ಯುಎಸ್ ಎ ಇಲ್ಲಿಗೆ ಬರೆಯಲು ಅಥವಾ ಅದನ್ನು ಅವಲೋಕಿಸಲು ನಮ್ಮ ವೆಬ್ ಸೈಟ್ www.familyradio.com: ಅನ್ನು ನೋಡಲು ನಿಮ್ಮನ್ನು ಆಮಂತ್ರಿಸುತ್ತೀದ್ದೇವೆ.

**ಐ ಹೋಪ್ ಗಾಡ್ ವಿಲ್ ಸೇವ್ ಮಿ**
**ವಿ ಆರ್ ಅಲ್ ಮೋಸ್ಟ್ ದೇರ್!**
**ಟು ಗಾಡ್ ಬಿ ದಿ ಗ್ಲೋರಿ!**

ನೀವು ಓದಿರುವ ಈ ವಿಷಯದಲ್ಲಿ ನಿಮಗೆ ಏನಾದರೂ ಪ್ರಶ್ನೆಗಳಿದ್ದರೆ ಅಥವಾ ನಿಮಗೆ ಜಗತ್ತಿನಾದ್ಯಂತ ಪ್ರಸರಣಗೊಳ್ಳುವ ಉಚಿತ ತರಾಂಗಾಂತರದ ಶೆಡ್ಯೂಲ್ ನಿಮಗೆ ಬೇಕಿದ್ದಲ್ಲಿ, ದಯವಿಟ್ಟು ಇಲ್ಲಿಗೆ ಬರೆಯಿರಿ:


**ಫ್ಯಾಮಿಲೀ ರೇಡಿಯೋ**
**ಓಕ್ ಲ್ಯಾಂಡ್, ಕ್ಯಾಲಿಪೋರ್ನಿಯಾ 94621**
**ಯುಎಸ್ ಎ**

ಅಂತರ್ ಜಾಲದಲ್ಲಿ: **http://www.familyradio.com**

ಇ-ಮೇಲ್: **International@familyradio.com**


ಫ್ಯಾಮಿಲೀ ರೇಡಿಯೋವು ಜಗತ್ತಿನಾದ್ಯಾಂತ 50 ಭಾಷೆಗಳಲ್ಲಿ ಪ್ರಸಾರ ಮಾಡುತ್ತಿದೆ.

ಫ್ಯಾಮಿಲೀ ರೇಡಿಯೋವು ಒಂದು ಬೈಬಲ್ ಆಧಾರಿತ ಕ್ರಿಶ್ಚಿಯನ್ ರೇಡಿಯೋ ಧರ್ಮಪ್ರಚಾರಕ ಸಂಸ್ಥೆಯಾಗಿದ್ದು ಇದು ಯಾವುದೇ ಚರ್ಚ್ ಗೆ ಒಳಪಟ್ಟಿಲ್ಲ.


KANADA NMK 07-27-10